6	ಅಸಿಸ್ಟೆಂಟ್ ಸೆಂಟ್ರಲ್ ಇಂಟಲಿಜೆನ್ಸಿ, ವಿಜಾಪುರ, ಗುಪ್ತದಳ, ವಿಜಾಪುರ	ರೂ.53,820–00
7	ಉದ್ಯೋಗ ಅಧಿಕಾರಿಗಳು, ಜಿಲ್ಲಾ ಉದ್ಯೋಗ ವಿನಿಮಯ ಅಧಿಕಾರಿಗಳು, ವಿಜಾಪುರ	ರೂ.89,590–00
8	ಸಹಾಯಕ ಔಷಧ ನಿಯಂತ್ರಣ ಅಧಿಕಾರಿಗಳು, ವಿಜಾಪುರು	ರೂ.26,400–00
9	ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ವಿಜಾಪುರ	ರೂ.44,040–00
10	ಗೃಹ ರಕ್ಷಕ ದಳ ಸಮಾಜೇಷ್ಟರು, ವಿಜಾಪುರ	ರೂ.78,180–00
11	ಸಹಕಾರಿ ಸಂಘಗಳ ಲೆಕ್ಕ ಪರಿಶೋಧಕರ ಕಚೇರಿ, ವಿಜಾಪುರ	ರೂ.73,560–00
12	ಪೋಲೀಸ ಠಾಣೆ, ಆದರ್ಶ ನಗರ, ವಿಜಾಪುರ	ರೂ.53,040–00
13	ಉಪಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಕೇಂದ್ರ,(ತರಬೇತಿ ವಸತಿ ಗೃಹ) ವಿಜಾಪುರ	ರೂ.108,720–00
14	ವ್ಯವಸ್ಥಾಪಕರು, ಕರ್ನಾಟಕ ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿ, ವಿಜಾಪುರ,	ರೂ.48,000–00
	ಒಟ್ಟು	**ರೂ.9,75,852–00**

4772 (5511) **ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ):** ಮಾನ್ಯಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಯಾವ ಯಾವ ಜಲಾಶಯಗಳಿಂದ ವಿದ್ಯುತ್ ಉತ್ಪಾದನೆಯಾಗುತ್ತಿದೆ;

ಆ) ಅವುಗಳು ಉತ್ಪಾದಿಸುತ್ತಿರುವ ಪ್ರಮಾಣ ಎಷ್ಟು;

ಇ)ಯಾವ ಯಾವ ಕಾರಣಕ್ಕಾಗಿ ಯಾವಯಾವ ಬಾಬ್ತುಗಳಿಗೆ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಖರ್ಚು ಮಾಡಲಾಗುತ್ತಿದೆ;

ಈ) ವಿದ್ಯುತ್ ಉತ್ಪಾದನೆಯಿಂದ ರಾಜ್ಯಕ್ಕೆ ಬರುತ್ತಿರುವ ಆದಾಯ ಎಷ್ಟು; ಜಲಾಶಯವಾರು ವಿವರ ನೀಡುವುದು;

ಉ) ರಾಜ್ಯವು ವಿದ್ಯುತ್ ಸಮಸ್ಯೆಯನ್ನು ಎದುರಿಸುತ್ತಿರುವುದು ನಿಜವೇ;

ಊ)ಹಾಗಿದ್ದಲ್ಲಿ, ವಿದ್ಯುತ್ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಮತ್ತು ಆ) ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಜಲಾಶಯಗಳು/ವಿದ್ಯುತ್ ಸ್ಥಾವರಗಳು ಹಾಗೂ ಉತ್ಪಾದಿಸಿದ ವಿದ್ಯುತ್‌ನ ವಿವರಗಳನ್ನು ಅನುಬಂಧ 1 ರಲ್ಲಿ ಒದಗಿಸಲಾಗಿದೆ (ಲಗತ್ತಿಸಿದೆ)

ಇ) 2004–05ರ ವರ್ಷದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಒಟ್ಟು 23088.47 ದಶಲಕ್ಷ ಯೂನಿಟ್ಟುಗಳನ್ನು ರಾಜ್ಯದ ವಿವಿಧ ವರ್ಗಗಳ ವಿದ್ಯುತ್ ಬಳಕೆದಾರರುಗಳಿಗೆ ಮಾರಾಟ ಮಾಡಿರುತ್ತವೆ.

ಗೃಹಬಳಕೆ, ವಾಣಿಜ್ಯ, ಕೃಷಿ, ಕೈಗಾರಿಕೆ, ಕುಡಿಯುವ ನೀರು, ಸಾರ್ವಜನಿಕ ಬೀದಿ ದೀಪಗಳು ಇತ್ಯಾದಿ ಬಾಬ್ತುಗಳಿಗೆ ವಿನಿಯೋಗಿಸಲ್ಪಟ್ಟ ವಿದ್ಯುತ್ತಿನ ಪ್ರಮಾಣದ ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಿದೆ.

ಈ) ಕರ್ನಾಟಕ ವಿದ್ಯುತ್ ನಿಗಮವು ತನ್ನ ಜಲ ವಿದ್ಯುತ್ ಯೋಜನೆಗಳ ಮೂಲಕ 2004–2005ನೇ ಸಾಲಿನಲ್ಲಿ ಒಟ್ಟು 8247.32 ದ.ಲ.ಯೂನಿಟ್‌ಗಳನ್ನು ವಿದ್ಯುತ್ ಉತ್ಪಾದಿಸಿ, ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮಕ್ಕೆ 8139.75 ದ.ಲ.ಯೂ.ಗಳಷ್ಟು ವಿದ್ಯುತ್ ಮಾರಾಟ ಮಾಡಿದೆ. ನಿಗಮವು ವಿದ್ಯುತ್ ಉತ್ಪಾದಿಸಲು ಜಲಾಶಯಗಳಿಂದ ಉಪಯೋಗಿಸಿದ ನೀರಿಗೆ ಒಟ್ಟು 31.83 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರಕ್ಕೆ ಗೌರವಧನವಾಗಿ ನೀಡಿದೆ. ಇವುಗಳ ವಿವರಗಳನ್ನು ಅನುಬಂಧ–3 ರಲ್ಲಿ ಒದಗಿಸಲಾಗಿದೆ.

ಉ) ಹೌದು, ನಿಜ. 2004–05 ಸಾಲಿನಲ್ಲಿ ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು ಸುಮಾರು 38,949 ದಶ ಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿತ್ತು. ಎಲ್ಲಾ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಒಟ್ಟು ಪ್ರಮಾಣ 33,110 ದಶಲಕ್ಷ ಯೂನಿಟ್ಟುಗಳು. ಆದುದರಿಂದ ರಾಜ್ಯವು

2004–05ರ ಸಾಲಿನಲ್ಲಿ ಸುಮಾರು 5839 ದಶಲಕ್ಷ ಯೂನಿಟ್ಟುಗಳು. ಆದುದರಿಂದ ರಾಜ್ಯವು 2004–05 ರ ಸಾಲಿನಲ್ಲಿ ಸುಮಾರು 5839 ದಶಲಕ್ಷ ಯೂನಿಟ್ಟುಗಳ ವಿದ್ಯುತ್ ಕೊರತೆಯನ್ನು ಅನುಭವಿಸಿತು. ಪ್ರಸಕ್ತ ಸಾಲಿನಲ್ಲಿ (2005–06) ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು ಸುಮಾರು 39,900 ದಶಲಕ್ಷ ಯೂನಿಟ್ಟುಗಳೆಂದು ಹಾಗೂ ಎಲ್ಲಾ ಮೂಲಗಳಿಂದ ಲಭ್ಯವಾಗುವ ವಿದ್ಯುತ್‌ನ ಪ್ರಮಾಣ ಸುಮಾರು 35,324 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ. ಆದ್ದರಿಂದ, ಪ್ರಸಕ್ತ ಸಾಲಿನಲ್ಲಿಯೂ (2005–06) ಸುಮಾರು 4576 ದಶಲಕ್ಷ ಯೂನಿಟ್ಟುಗಳ ವಿದ್ಯುತ್ ಕೊರತೆಯನ್ನು ರಾಜ್ಯವು ಅನುಭವಿಸಲಿದೆ.

ಊ) ರಾಜ್ಯವು ಅನುಭವಿಸುತ್ತಿರುವ ವಿದ್ಯುತ್ ಕೊರತೆಯ ನಿವಾರಣೆಗಾಗಿ ಹೆಚ್ಚುವರಿ ವಿದ್ಯುತ್ ಉತ್ಪಾದನೆಗಾಗಿ ಈ ಕೈಗೊಂಡ ಕ್ರಮದ ವಿವರವನ್ನು ಅನುಬಂಧ–4ರಲ್ಲಿ ಒದಗಿಸಲಾಗಿದೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಪ್ಪಸಾಹೇಬ್ (ಅಪ್ಪ) ಮಲ್ಲಪ್ಪ ಶೆಟ್ಟಿ (ಬಿಜಾಪುರ) ಇವರ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 5511ಕ್ಕೆ. ಅನುಬಂಧ–1

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಜಲಾಶಯಗಳು/ ವಿದ್ಯುತ್ ಸ್ಥಾವರಗಳ ಹಾಗೂ ಉತ್ಪಾದಿಸಿದ ವಿದ್ಯುತ್‌ನ ವಿವರಗಳು ಈ ಕೆಳಕಂಡಂತಿವೆ:

ಯೋಜನೆಗಳು	ಸ್ಥಾಪಿತ ಸಾಮರ್ಥ್ಯ ಮೆ.ವ್ಯಾ.ಗಳಲ್ಲಿ	ವಿದ್ಯುತ್ ಉತ್ಪಾದನೆ 2004–05 ದ.ಲ.ಯೂ.ಗಳಲ್ಲಿ
ಶರಾವತಿ ವಿದ್ಯುತ್ ಸ್ಥಾವರ	1035	3854.66
ಲಿಂಗನಮಕ್ಕಿ ಆಣೆಕಟ್ಟು ವಿದ್ಯುದಾಗಾರ	55	193.87
ಭದ್ರಾ ವಿದ್ಯುತ್ ಸ್ಥಾವರ	39.20	41.40
ನಾಗಝರಿ ವಿದ್ಯುದಾಗಾರ	855	1719.95
ಸೂಪ ಆಣೆಕಟ್ಟು ವಿದ್ಯುದಾಗಾರ	100	295.99
ವರಾಹಿ ಜಲವಿದ್ಯುತ್ ಸ್ಥಾವರ	230	974.00

ಮಾಣಿ ಆಣೆಕಟ್ಟು ವಿದ್ಯುದಾಗಾರ	9	22.47
ಘಟಪ್ರಭಾ ಆಣೆಕಟ್ಟು ವಿದ್ಯುದಾಗಾರ	32	96.80
ಕದ್ರಾ ಆಣೆಕಟ್ಟು ವಿದ್ಯುದಾಗಾರ	150	231.51
ಕೊಡಸಳ್ಳಿ ಆಣೆಕಟ್ಟು ವಿದ್ಯುದಾಗಾರ	120	217.89
ಗೇರುಸೊಪ್ಪ ಆಣೆಕಟ್ಟು ವಿದ್ಯುದಾಗಾರ	240	437.90
ಆಲಮಟ್ಟಿ ಆಣೆಕಟ್ಟು ವಿದ್ಯುದಾಗಾರ	235	139.21
ಕಿರು ಜಲವಿದ್ಯುತ್ ಸ್ಥಾವರಗಳು	10.75	21.67
ಒಟ್ಟು ಜಲವಿದ್ಯುತ್	**3110.95**	**8247.32**

ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತವು ಈ ಕೆಳ ಕಂಡ ಜಲ ಮತ್ತು ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳನ್ನು ಹೊಂದಿದ್ದು, ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿರುತ್ತೆ.

ಕ್ರ.ಸ.	ವಿದ್ಯುದಾಗಾರಗಳು	
1	ಮಹಾತ್ಮಗಾಂಧಿ ಜಲವಿದ್ಯುತ್ ಘಟಕ, ಜೋಗ	ಶಿವಮೊಗ್ಗ ಜಿಲ್ಲೆ
2	ಶಿವಸಮುದ್ರ ಜಲವಿದ್ಯುತ್ ಘಟಕ, ಶಿವಸಮುದ್ರ	ಮಂಡ್ಯ ಜಿಲ್ಲೆ
3	ಶಿಂಷಾಪುರ ಜಲವಿದ್ಯುತ್ ಘಟಕ, ಶಿಂಷಾಪುರ	ಮಂಡ್ಯ ಜಿಲ್ಲೆ
4	ಮುನಿರಾಬಾದ್ ಜಲವಿದ್ಯುತ್ ಘಟಕ, ಮುನಿರಾಬಾದ್	ಕೊಪ್ಪಳ ಜಿಲ್ಲೆ
5	ಡಿಜೇಲ್ ಆಧಾರಿತ ವಿದ್ಯುತ್ ಘಟಕ,	ಯಲಹಂಕ,ಬೆಂಗಳೂರು

ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತದ ವಿದ್ಯುದಾಗಾರಗಳ ಸ್ಥಾಪಿತ ಸಾಮರ್ಥ್ಯ ಮತ್ತು ಪ್ರತಿ ಯುನಿಟಿನ ದರಗಳು ಕೆಳಗಿನಂತಿ ಇವೆ.

ಕ್ರ. ಸಂ	ವಿದ್ಯುದಾಗಾರಗಳು	ಘಟಕಗಳ ಸಂಖ್ಯೆ	ಸ್ಥಾಪಿತ ಸಾಮರ್ಥ್ಯ (ಮೆಗಾ ವ್ಯಾಟ್)	ಪ್ರತಿ ಯುನಿಟನ ದರ (ರೂ.)
1	ಮಹಾತ್ಮಗಾಂಧಿ ಜಲವಿದ್ಯುತ್ ಘಟಕ	8(4*13.2+4*21.6)	139.2	1.04
2	ಶಿವಸಮುದ್ರ ಜಲವಿದ್ಯುತ್ ಘಟಕ	10(4*6+6*3)	42.00	0.99
3	ಶಿಂಷಾಪುರ ಜಲವಿದ್ಯುತ್ ಘಟಕ	2(2*8.6)	17.20	0.33
4	ಮುನಿರಾಬಾದ್ ಜಲವಿದ್ಯುತ್ ಘಟಕ	3(2*9+1*10)	28.00	0.56
5	ಡಿಜೇಲ್ ಆಧಾರಿತ ವಿದ್ಯುತ್ ಘಟಕ	6(21.32*6)	127.92*	4.17

(*) ಮೂಲ ಸಾಮರ್ಥ್ಯ – 108 ಮೆ.ವ್ಯಾ.

ವಿಧಾನಸಭೆಯ ಮಾನ್ಯ ಸದಸ್ಯರಾದ ಶ್ರೀ ಅಪ್ಪಾಸಾಹೇಬ (ಅಪ್ಪು)ಮಲ್ಲಪ್ಪ ಪಟ್ಟಣ ಶೆಟ್ಟಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 5511 ಕ್ಕೆ ಅನುಬಂಧ–2.

2004–05ರ ಸಾಲಿನಲ್ಲಿ ವಿವಿಧ ಬಾಬ್ತುಗಳಿಗೆ ಮಾರಾಟವಾದ ವಿದ್ಯುತ್ತಿನ ಪ್ರಮಾಣದ ವಿವರಗಳು

ಕ್ರ.ಸಂ.	ಬಾಬ್ತುಗಳು	ಮಾರಾಟವಾದ ವಿದ್ಯುತ್‌ನ ಪ್ರಮಾಣ (ದಶಲಕ್ಷ ಯೂನಿಟ್‌ಗಳಲ್ಲಿ
1	ಗೃಹ ಬಳಕೆ (ಭಾಗ್ಯಜ್ಯೋತಿ/ ಕುಟೀರ ಜ್ಯೋತಿ ಸೇರಿದಂತೆ)	4928.46
2	ವಾಣಿಜ್ಯ	1894.26
3	ಕೃಷಿ (ಏತ ನೀರಾವರಿಯೂ ಸೇರಿದಂತೆ)	9157.05
4	ಕೈಗಾರಿಕೆಗಳು	5057.36
5	ಕುಡಿಯುವ ನೀರು, ಸಾರ್ವಜನಿಕ ಬೀದಿ ದೀಪಗಳು, ಇತ್ಯಾದಿ	2051.34
	ಒಟ್ಟು	**23088.47**

ಅನುಬಂಧ – 3

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು 2004–2005ನೇ ಸಾಲಿನಲ್ಲಿ ತನ್ನ ಜಲವಿದ್ಯುತ್ ಯೋಜನೆಗಳ ಮೂಲಕ ಉತ್ಪಾದಿಸಿದ ವಿದ್ಯುತ್ ಹಾಗೂ ಮಾರಾಟಗಳ ವಿವರ ಈ ಕೆಳಕಂಡಂತಿವೆ:

ಕ್ರ. ಸಂ.	ಯೋಜನೆಗಳು	ಸ್ಥಾಪಿತ ಸಾಮರ್ಥ್ಯ ಮೆ.ವ್ಯಾ.ಗಳಲ್ಲಿ	ಉತ್ಪಾದಿಸಿದ ವಿದ್ಯುತ್ ದ.ಲ.ಯು.
	ಬೃಹತ್ ಜಲ ವಿದ್ಯುತ್ ಯೋಜನೆಗಳು		
1	ಶರಾವತಿ ಜಲವಿದ್ಯುತ್ ಸ್ಥಾವರ	1035	3854.66
2	ಚಕ್ರಾ		500.00
3	ಲಿಂಗನಮಕ್ಕಿ ಅಣೆಕಟ್ಟು ವಿದ್ಯುದಾಗಾರ	55	193.87
4	ಭದ್ರಾ ವಿದ್ಯುತ್ ಸ್ಥಾವರ	33.00	19.79
5	ನಾಗಝರಿ ವಿದ್ಯುದಾಗಾರ	855	1719.95
6	ಸೂಪ ಅಣೆಕಟ್ಟು ವಿದ್ಯುದಾಗಾರ	100	295.99
7	ವರಾಹಿ ಜಲವಿದ್ಯುತ್ ಸ್ಥಾವರ	230	974.00
8	ಮಾಣಿ ಅಣೆಕಟ್ಟು ವಿದ್ಯುದಾಗಾರ	9	22.47
9	ಘಟಪ್ರಭಾ ಅಣೆಕಟ್ಟು ವಿದ್ಯುದಾಗಾರ	32	96.80
10	ಕದ್ರಾ ಅಣೆಕಟ್ಟು ವಿದ್ಯುದಾಗಾರ	150	231.51
11	ಕೊಡಸಳ್ಳಿ ಆಣೆಕಟ್ಟು ವಿದ್ಯುದಾಗಾರ	120	217.89
12	ಭದ್ರಾ ಬಲದಂಡೆ ಯೋಜನೆ	6.20	21.61
13	ಗೇರುಸೊಪ್ಪ	240	437.90
14	ಆಲಮಟ್ಟಿ	180	139.21
	ಕಿರು ಜಲವಿದ್ಯುತ್ ಯೋಜನೆಗಳು		
15	ಮಲ್ಲಾಪುರ	9.00	21.50
16	ಸಿರ್ವಾರ	1.00	0.04
17	ಗನೇಕಲ್	0.35	0.06
18	ಕಲ್ಮಲ	0.40	0.08
	ಒಟ್ಟು ಜಲವಿದ್ಯುತ್	**3055.95**	**8247.32**

ಕ್ರ. ಸಂ.	ಯೋಜನೆಗಳು	ವಿದ್ಯುತ್‌ನ ಮಾರಾಟ ದ.ಲ.ಯು.	ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಗೌರವಧನ	
			ದರ ಪೈಸೆ /ಕಿ.ವ್ಯಾ.ಗೆ	ಮೊತ್ತ ಕೋಟಿ ರೂ.ಗಳಲ್ಲಿ
	ಬೃಹತ್ ಜಲ ವಿದ್ಯುತ್ ಯೋಜನೆಗಳು			
1	ಶರಾವತಿ ಜಲವಿದ್ಯುತ್ ಸ್ಥಾವರ	3814.51	4.00	15.26
2	ಚಕ್ರಾ	500.00		
3	ಲಿಂಗನಮಕ್ಕಿ ಅಣೆಕಟ್ಟು ವಿದ್ಯುದಾಗಾರ	191.30	4.00	0.77
4	ಭದ್ರಾ ವಿದ್ಯುತ್ ಸ್ಥಾವರ	18.89	4.00	9.08
5	ನಾಗಝರಿ ವಿದ್ಯುದಾಗಾರ	1696.92	4.00	6.79
6	ಸೂಪ ಅಣೆಕಟ್ಟು ವಿದ್ಯುದಾಗಾರ	289.27	4.00	1.16
7	ವರಾಹಿ ಜಲವಿದ್ಯುತ್ ಸ್ಥಾವರ	952.05	4.00	3.81
8	ಮಾಣಿ ಅಣೆಕಟ್ಟು ವಿದ್ಯುದಾಗಾರ	22.34		
9	ಘಟಪ್ರಭಾ ಅಣೆಕಟ್ಟು ವಿದ್ಯುದಾಗಾರ	95.20	4.00	0.36
10	ಕದ್ರಾ ಅಣೆಕಟ್ಟು ವಿದ್ಯುದಾಗಾರ	228.22	4.00	0.91
11	ಕೊಡಸಳ್ಳಿ ಆಣೆಕಟ್ಟು ವಿದ್ಯುದಾಗಾರ	216.47	4.00	0.87
12	ಭದ್ರಾ ಬಲದಂಡೆ ಯೋಜನೆ	20.63	4.00	0.08

13	ಗೇರುಸೊಪ್ಪ	435.25	4.00	1.74
14	ಆಲಮಟ್ಟಿ	136.24		
	ಕಿರು ಜಲವಿದ್ಯುತ್ ಯೋಜನೆಗಳು			
15	ಮಲ್ಲಾಪುರ	21.29		
16	ಸಿರ್ವಾರ	0.04		
17	ಗನೇಕಲ್	0.06		
18	ಕಲ್ಮಲ	0.08		
	ಒಟ್ಟು ಜಲವಿದ್ಯುತ್	**8138.75**	**4.00**	**31.83**

ಅನುಬಂಧ–4

ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯೋಜನೆಗಳು

ಹಾಲಿ ಚಾಲನೆಯಲ್ಲಿರುವ ಯೋಜನೆಗಳು

ಸ್ಥಾಪಿತ ಸಾಮರ್ಥ್ಯ ಮೆ.ವ್ಯಾ.ಗಳಲ್ಲಿ

ಆಲಮಟ್ಟಿ ಆಣೆಕಟ್ಟು ವಿದ್ಯುದಾಗಾರ 290

(ಈಗಾಗಲೇ 235 ಮೆ.ವ್ಯಾ.ಕಾರ್ಯಾರಂಭಗೊಂಡಿದೆ ಇದರಲ್ಲಿ 55 ಮೆ.ವ್ಯಾ. ಸಾಮರ್ಥ್ಯದ 5 ನೇ ಘಟಕವು ದಿನಾಂಕ: 6.7.2005 ರಂದು ಕಾರ್ಯಾರಂಭಗೊಂಡಿದ್ದು ಸೇರಿದೆ. 55 ಮೆ.ವ್ಯಾ. ಸಾಮರ್ಥ್ಯದ 6ನೇ ಘಟಕವು ಜುಲೈ 2005ರಲ್ಲಿ ಕಾರ್ಯಾರಂಭಗೊಳ್ಳಲಿದೆ.

ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಹಂತ 1 500

ಯೋಜನೆಯ ಕಾಮಗಾರಿಯು ಡಿಸೆಂಬರ್ 2003ರಲ್ಲಿ ಪ್ರಾರಂಭವಾಗಿದೆ. ಎಲ್ಲಾ ಕಾಮಗಾರಿಗಳೂ ನಿಗದಿತ ಗುರಿಗಿಂತ ಮುಂದಿವೆ. ಈ ಘಟಕವು ಸೆಪ್ಟಂಬರ್ 2006ರ ವೇಳೆಗೆ ಕಾರ್ಯಾರಂಭಗೊಳ್ಳುವ ನಿರೀಕ್ಷೆಯಿದೆ.

ಪಿಪಿಪಿ ಸಂಯುಕ್ತ ಉಷ್ಣ ವಿದ್ಯುತ್ ಯೋಜನೆ ಹಂತ 1 1400

ಈ ಯೋಜನೆಗಾಗಿ ಎಲ್ಲಾ ಒಪ್ಪಗೆಯನ್ನು ಪಡೆಯಲಾಗಿದೆ. ಅನಿಲ ಸರಬರಾಜಿನ ಒಪ್ಪಂದದ ನಂತರ ಇ.ಪಿ.ಸಿ. ಗುತ್ತಿಗೆಯನ್ನು ಅಂತಿಮಗೊಳಿಸಲಾಗುವುದು.

ವರಾಹಿ ಜಲವಿದ್ಯುತ್ ಯೋಜನೆ ಹಂತ–2 230

ಇಪಿಸಿ ಬಿಡ್ಸ್‌ನ ಮೌಲ್ಯೀಕರಣ ಕಾರ್ಯ ನಡೆದಿದೆ.
ನಾಗಝರಿ ವಿದ್ಯುದಾಗಾರ ಘಟಕ 4,5

ಮತ್ತು 6ರ ನವೀಕರಣ ಹಾಗೂ ಉನ್ನತೀಕರಣ ಕಾರ್ಯ 45

ಘಟಕ 4ರ ಉನ್ನತೀಕರಣ ಕಾರ್ಯವು ಪ್ರಗತಿಯಲ್ಲಿದ್ದು ಘಟಕವನ್ನು ಅಕ್ಟೋಬರ್ 2005ರ ವೇಳೆಗೆ ಪುನರ್ ಕಾರ್ಯಾರಂಭಗೊಳಿಸಲಾಗುವುದು. ನಂತರ ಘಟಕ 5ಮತ್ತು 6ರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಭವಿಷ್ಯದ ಉದ್ದೇಶಿತ ಯೋಜನೆಗಳು:

	ಮೆ.ವ್ಯಾ.
ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ ಘಟಕ 8	210
ಬಳ್ಳಾರಿ ಶಾಖೋತ್ಪನ್ನ ಕೇಂದ್ರ ಹಂತ 2	500
ಗುಂಡ್ಯಾ ಜಲವಿದ್ಯುತ್ ಯೋಜನೆ	400
ಬಿಡದಿ ಸಂಯುಕ್ತ ಆವರ್ತಕ ಯೋಜನೆ ಹಂತ 2	700

ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತದ ಯೋಜನೆಗಳು

1) ಮಹಾತ್ಮಾ ಗಾಂಧಿ ವಿದ್ಯುತ್ ಘಟಕ, ಜೋಗಫಾಲ್ಸ್:

1. ಪ್ರಾರಂಭಿಕ ವರ್ಷ	ಫೆಬ್ರುವರಿ 2000
2. ಕಾರ್ಯ ಮುಗಿಸಲು ನಿಗದಿತ ದಿನಾಂಕ	ಫೆಬ್ರುವರಿ 2001
3. ಕಾರ್ಯ ಮುಗಿದ ದಿನಾಂಕ	ಅಕ್ಟೋಬರ್ 2002
4. ನವೀಕರಣಕ್ಕಿಂತ ಮೊದಲು ಘಟಕದ ಸಾಮರ್ಥ್ಯ	120 ಮೆ.ವ್ಯಾ.
5. ನವೀಕರಣದ ನಂತರ ಘಟಕದ ಸಾಮರ್ಥ	139.2 ಮೆ.ವ್ಯಾ.
6. ನಿರೀಕ್ಷಿತ ವಿದ್ಯುತ್ ಉತ್ಪಾದನೆ	250 ಮೀ.ಯೂ
7. ಅಂದಾಜು ಖರ್ಚು	ರೂ.44.66 ಕೋಟಿಗಳು
8. ಪಿ.ಎಫ್.ಸಿ.ಯ ಸಾಲ	ರೂ.23.50 ಕೋಟಿಗಳು
9. ವಾಸ್ತವಿಕ ಖರ್ಚು	ರೂ.42.33 ಕೋಟಿಗಳು

2) ಶಿವನಸಮುದ್ರ ವಿದ್ಯುತ್ ಘಟಕ, ಶಿವನಸಮುದ್ರ:

1. ಪ್ರಾರಂಭಿಕ ವರ್ಷ	ಅಕ್ಟೋಬರ್ 1999
2. ಕಾರ್ಯ ಮುಗಿಸಲು ನಿಗದಿತ ದಿನಾಂಕ	ಏಪ್ರಿಲ್ 2001
3. ಕಾರ್ಯ ಮುಗಿದ ದಿನಾಂಕ	ಮಾರ್ಚ್2004
4. ನವೀಕರಣಕ್ಕಿಂತ ಮೊದಲು ಘಟಕದ ಸಾಮರ್ಥ್ಯ	42 ಮೆ.ವ್ಯಾ 25 ಸಿ/ಎಸ್
5. ನವೀಕರಣದ ನಂತರ ಘಟಕದ ಸಾಮರ್ಥ್ಯ	42 ಮೆ.ವ್ಯಾ 50 ಸಿ/ಎಸ್
6. ನಿರೀಕ್ಷಿತ ವಿದ್ಯುತ್ ಉತ್ಪಾದನೆ	185 ಮಿ.ಯೂ
7. ಅಂದಾಜು ಖರ್ಚು	ರೂ.75.38 ಕೋಟಿಗಳು
8. ಪಿ.ಎಫ್.ಸಿ.ಯ ಸಾಲ	ರೂ.48.00 ಕೋಟಿಗಳು
9. ವಾಸ್ತವಿಕ ಖರ್ಚು	ರೂ.69.84 ಕೋಟಿಗಳು

3) ಮುನಿರಾಬಾದ್ ವಿದ್ಯುತ್ ಘಟಕ, ಮುನಿರಾಬಾದ್:

1.ಪ್ರಾರಂಭಿಕ ವರ್ಷ	ಏಪ್ರಿಲ್ 2001
2.ಕಾರ್ಯ ಮುಗಿಸಲು ನಿಗದಿತ ದಿನಾಂಕ	ಜುಲೈ 2001
3.ಕಾರ್ಯ ಮುಗಿದ ದಿನಾಂಕ	ಅಕ್ಟೋಬರ್ 2002
4.ನವೀಕರಣಕ್ಕಿಂತ ಮೊದಲು ಘಟಕದ ಸಾಮರ್ಥ್ಯ	28 ಮೆ.ವ್ಯಾ.
5.ನವೀಕರಣದ ನಂತರ ಘಟಕದ ಸಾಮರ್ಥ್ಯ	28 ಮೆ.ವ್ಯಾ
6 ನಿರೀಕ್ಷಿತ ವಿದ್ಯುತ್ ಉತ್ಪಾದನೆ	100 ಮಿ.ಯೂ.
7 ಅಂದಾಜು ಖರ್ಚು	ರೂ.3.64 ಕೋಟಿಗಳು
8 ಎಫ್.ಸಿ. ಯ ಸಾಲ	ರೂ.1.82 ಕೋಟಿಗಳು
9 ವಾಸ್ತವಿಕ ಖರ್ಚು	ರೂ.3.35 ಕೋಟಿಗಳು

4773(5636) **ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ)** : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 2001–2002ನೇ ಸಾಲಿನಲ್ಲಿ ಬರಗಾಲದ ಹಿನ್ನೆಲೆಯಲ್ಲಿ ರಾಜ್ಯದ ಪಂಪ್‌ಸೆಟ್ ಬಳಕೆದಾರರ ವಿದ್ಯುತ್ ಬಾಕಿ ಹಾಗೂ ಬಡ್ಡಿಯನ್ನು ಪೂರ್ಣ ಮನ್ನಾ ಮಾಡಲಾಗಿದೆಯೇ ;